**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 471/2023**

**ಪ್ರಾಸಾಃ- 2 ಚಾಸಾಃ- 2**

| | | |
|---|---|---|
| ಸಾಕ್ಷಿಯ ಹೆಸರು | : | ಅಕ್ಬರ್ |
| ತಂದೆಯ ಹೆಸರು | : | ಭಾಷಾ ಅಲಿಯಾಸ್ ಮಹಮ್ಮದ್ |
| ವಯಸ್ಸು | : | 35 ವರ್ಷ |
| ವೃತ್ತಿ | : | ಪಂಚರ್ ಶಾಪ್‌ನಲ್ಲಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 30.10.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 1 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರು ಗೊತ್ತು. ದಿಃ 17-11-2022 ರಂದು ಪೋಲೀಸರು ನನಗೆ ಎರಡು ನೋಟೀಸ್ ಗಳನ್ನು ಕೊಟ್ಟಿದ್ದರು. ಸದರಿ ಎರಡು ನೋಟೀಸ್‌ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-10 ಮತ್ತು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ10(ಎ) ಮತ್ತು ನಿಪಿ-11(ಎ) ಎಂದು ಗುರುತಿಸಲಾಯಿತು. ಬಳ್ಳಾರಿಯ ಬಸ್ ಡಿಪೋ 3 ನೇ ಗೇಟ್ ಮುಂದೆ ಸಿಮೆಂಟ್ ರಸ್ತೆಯ ಮೇಲೆ ಪೋಲೀಸರು ಸಂಜೆ 4-00 ರಿಂದ 5-00 ರವರೆಗೆ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ. ಸದರಿ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಆರೋಪಿತರು ಚಾಸಾ 1 ರವರಿಗೆ ಬ್ಯಾಡಾರ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ತಿಳಿಸಿರುತ್ತಾನೆ. ಸಾಕ್ಷಿಯು ನಿಪಿ-2 ನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-3 ಪೋಟೋ ನೋಡಿ ಗುರುತಿಸಿದ್ದು ಅದರಲ್ಲಿ ತಾನು ಇರುವುದಾಗಿ ತಿಳಿಸಿರುತ್ತಾನೆ. ಸದರಿ ಪಂಚನಾಮೆ ಕಾಲಕ್ಕೆ ವೀಡಿಯೋ ಮಾಡಿರುತ್ತಾರೆ. ಸಾಕ್ಷಿಯು ನಿಪಿ-4 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ವಿದ್ಯಾನಗರದ ಅಂಗವಿಕಲರ ಕೇಂದ್ರ ಕಾಂಪೌಂಡ್ ಫ್ಲಾಟ್ ಫಾರಮ್ ಬಳಿ

ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲಿ ತನಿಖಾಧಿಕಾರಿಯು ನಿಪಿ-5 ರಂತೆ ಸಂಜೆ 5-45 ರಿಂದ 6-45 ರ ವರೆಗೆ ಪಂಚನಾಮೆ ಮಾಡಿರುತ್ತಾರೆ. ಚಾಸಾ 1 ರವರು ಆರೋಪಿತರಿಗೆ ದುಡ್ಡು ಕೊಡಲು ಹೋದಾಗ ಆರೋಪಿತರು ಚಾಸಾ 1 ರವರನ್ನು ಅಲ್ಲಿ ಬೈದಿರುತ್ತಾರೆ ಎಂದು ಚಾಸಾ 1 ರವರು ಸ್ಥಳ ತೋರಿಸಿದ ಬಗ್ಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ನಿಪಿ-5 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ಪೋಟೋ ನೋಡಿ ಗುರುತಿಸಿರುತ್ತಾರೆ.

2. ದಿಃ 18-11-2022 ರಂದು ತನಿಖಾಧಿಕಾರಿಯು ನನ್ನನ್ನು ಕರೆಸಿ ನನಗೆ ನೋಟೀಸ್ ಕೊಟ್ಟಿರುತ್ತಾರೆ. ಸಾಕ್ಷಿಯು ಸದರಿ ನೋಟೀಸ್ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಚಾಸಾ 1 ರವರ ವಸತಿಗೃಹ ಸಂಖ್ಯೆ 6 ಕ್ಕೆ ನನ್ನನ್ನು ಕರೆಸಿದ್ದು ಆರೋಪಿತರು ಚಾಸಾ 1 ರವರಿಗೆ ಬೈದ ಕಾರಣ ಚಾಸಾ 1 ರವರು ಫಿನೈಲ್ ಕುಡಿದ ಸ್ಥಳ ಎಂದುಕ ತನಿಖಾಧಿಕಾರಿಯು ಬೆಳಿಗ್ಗೆ 10-00 ರಿಂದ 11-00 ಗಂಟೆವರೆಗೆ ನಿಪಿ-7 ರಂತೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ನಿಪಿ-7 ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-9 ರ ಪಂಚನಾಮೆ ಸಿಡಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಎಸ್ ವಕೀಲರಿಂದಃ**

3. ನನಗೆ ಹರಿಮೂರ್ತಿ ಮತ್ತು ಸಿಪಿಐ ರವರ ಪರಿಚಯ ಇಲ್ಲ ಎಂದರೆ ಸರಿ. ನನಗೆ ನೋಟೀಸನ್ನು ಯಾರು ಎಲ್ಲಿ ತಲುಪಿಸಿರುತ್ತಾರೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ ಎಂದರೆ ಸರಿ. ಪಂಚನಾಮೆಗಳಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಪಂಚನಾಮೆ ಮಾಡಲು ಹೋದ ಸ್ಥಳಗಳ ಚೆಕ್ ಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿ. ನನಗೆ ಚಾಸಾ 1 ರವರು ಯಾವುದೇ ವಿಚಾರವನ್ನು ತಿಳಿಸಿ ಹೇಳಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ಫಿನೈಲ್ ಮತ್ತು ಆಲ್‌ಔಟ್ ನ್ನು ಎಲ್ಲಿಂದ ತೆಗೆದುಕೊಂಡು

ಬಂದು ಇಟ್ಟಿರುತ್ತಾರೆ ಎಂದು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಮನೆಯಲ್ಲಿ ಯಾರು ಯಾರು ಇದ್ದರು ಎಂದು ನಿಪಿ-7 ರಲ್ಲಿ ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**